ದಿನಾಂಕ **:** 05.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿಯ ಪರವಾಗಿ ಶ್ರೀ ಎ.ಎ. ವಕೀಲರಿಂದ :**

*ದಾವಾಆಸ್ತಿಗೆ ಹೊಂದಿಕೊಂಡಂತೆ ವಾದಿಯವರು ನಿವೇಶನ ಹೊಂದಿದ್ದು ಅದರಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದಾರೆಂದರೆ ಸರಿಯಲ್ಲ. ಅವರು ಮನೆ ಕಟ್ಟಿಕೊಂಡು ವಾಸವಿರುವ ಬಗ್ಗೆ ನನಗೆ ತೊಂದರೆ ಇಲ್ಲ . ಸದರಿ ಮನೆಯ ಪತ್ರದಲ್ಲಿ ಉತ್ತರಕ್ಕೆ ಮಂಜಳಮ್ಮ ಎಂದು ತೋರಿಸಿದ್ದು ಸದರಿ ಮಂಜುಳಮ್ಮನವರು ದಾವಾಆಸ್ತಿಯನ್ನು ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ವಾದಿಯವರು ಯಜ್ಞವಲ್ಕ ಸಹಕಾರ ಸಂಘದಿಂದ ಖರೀದಿಸಿದಾಗಿನಿಂದ ಇಲ್ಲಿಯವರೆಗೆ ಸ್ವಾ ಧೀನ ಹೊಂದಿ ಅನುಭವಿಸುತ್ತಿದ್ದಾರೆಂದರೆ ಸರಿಯಲ್ಲ . ಉತ್ತರದ ಚೆಕ್ಕುಬಂದಿ ಮೊದಲು ಕಂದಾಯ ಆಸ್ತಿ ಇತ್ತು ಎಂದರೆ ಸರಿಯಲ್ಲ . ನಂತರ ಸದರಿ ಆಸ್ತಿ ಪುರಸಭೆಗೆ ವರ್ಗಾವಣೆಯಾಗಿ ಅದು ರಾಜೇಶ್ವರಿಯ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ . ಆದ್ದರಿಂದ ಉತ್ತರದ ಕಡೆಗೆ ಜಿ.ವಿ. ರಾಜೇಶ್ವರಿ ಎಂದು ಉಲ್ಲೇಖವಿದೆ ಎಂದರೆ ಸರಿಯಲ್ಲ. ವಾದಿಯವರು ಮನೆ ಕಟ್ಟಲು ಅನುಮತಿ ಪಡೆದು ಮನೆಯನ್ನು ಕಟ್ಟಿ ಸ್ವಾ ಧೀನ ಹೊಂದಿರುತ್ತಾರೆಂದರೆ ಸರಿ. **2016** ರಲ್ಲಿ ನಮ್ಮ ತಂದೆಯವರು ಜೆ.ಸಿ.ಬಿ. ಮೂಲಕ ವಾದಿಯವರ ಆಸ್ತಿಗೆ ತೊಂದರೆ ನೀಡಿದ ಕಾರಣ ಅವರು ಈ ದಾವೆ ಹಾಕಿದ್ದಾರೆಂದರೆ ಸರಿಯಲ್ಲ. ನಾನು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಪ್ರಬಲನಾಗಿರುವ ಕಾರಣ ವಾದಿಗಳಿಗೆ ತೊಂದರೆ ನೀಡುತ್ತಿದ್ದೇನೆಂದರೆ ಸರಿಯಲ್ಲ . ದಾವಾಆಸ್ತಿಯು **1964** ರಿಂದಲೂ ಪುರಸಭೆಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ . ಆ ಸಮಯದಲ್ಲಿ ಸದರಿ ಆಸ್ತಿಯು ಜೆ . ತಿಮ್ಮಸಂದ್ರ ಪಂಚಾಯಿತಿಗೆ ಸೇರಿತ್ತು. ಆದರೆ ಆ ಬಗ್ಗೆ ಯಾವುದೇ ದಾಖಲಾತಿ ನೋಡಿಲ್ಲ. ನಮಗೆ **1972** ರಲ್ಲಿ ಆಸ್ತಿ ಮಂಜೂರಾಗಿತ್ತು ಆದರೆ **1964** ರಲ್ಲಿ ಮಂಜೂರು ಆಗಿರಲಿಲ್ಲ. **1964** ರಲ್ಲಿಯೇ ಪುರಸಭೆಗೆ ಸೇರಿದ ಕಾರಣ **1972** ರಲ್ಲಿ ಜೆ.*

ತಿಮ್ಮಸಂದ್ರ ಪಂಚಾಯಿತಿಯವರು ನಮಗೆ ಯಾವುದೇ ಆಸ್ತಿಯನ್ನು ಮಂಜೂರು ಮಾಡಿಲ್ಲ ಎಂದರೆ ಸರಿಯಲ್ಲ . ಜೆ. ತಿಮ್ಮಸಂದ್ರ ಪಂಚಾಯಿತಿಯಿಂದ ಪುರಸಭೆಗೆ ದಾವಾಆಸ್ತಿ ಯಾವಾಗ ಬಂತು ಎಂದು ನನಗೆ ನೆನಪಿಲ್ಲ . ಬಾಲಾಂಜನೇಯ ಬಡಾವಣೆ ಮತ್ತು ಕೊಳ್ಳೂರು ಬಡಾವಣೆ ಪುರಸಭೆಗೆ ಸೇರಿವೆ ಎಂದರೆ ಸರಿ . ಅವುಗಳು ***2016*** ರಲ್ಲಿ ಪುರಸಭೆಗೆ ಸೇರಿವೆ ಎಂದರೆ ನನಗೆ ಗೊತ್ತಿಲ್ಲ . ನನ್ನ ಆಸ್ತಿಗೆ ಪುರಸಭೆಯಲ್ಲಿ ಕಂದಾಯ ಕಟ್ಟಿದ್ದೇನೆ ಮತ್ತು ಖಾತೆ ಪಡೆದಿದ್ದೇನೆ , ಆದರೆ ಯಾವ ವರ್ಷ ಎಂದು ನೆನಪಿಲ್ಲ . ಸಾಕ್ಷಿಗೆ ಅವರು ಹಾಜರುಪಡಿಸಿರುವ ದಾಖಲಾತಿಗಳನ್ನು ತೋರಿಸಲಾಗಿ ಅವುಗಳು ಇಲ್ಲ ಎಂದು ಹೇಳುತ್ತಾರೆ.

ನಾನು ಹೇಳುವಂತಹ ಯಾವುದೇ ಆಸ್ತಿ ಅಲ್ಲಿ ಇಲ್ಲ , ಆ ಕಾರಣದಿಂದ ನಾನು ಅಲ್ಲಿ ಕಂದಾಯ ಕಟ್ಟಿಲ್ಲ ಹಾಗೂ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ದಾವಾಆಸ್ತಿಯು ***1964*** ರಲ್ಲಿ ಪುರಸಭೆಗೆ ಸೇರಿದ್ದು ಅದಕ್ಕೂ ಮೊದಲೇ ಪರಿವರ್ತನೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ . ಆ ರೀತಿ ಆದ ನಂತರ ಯಜ್ಞವಲ್ಕ ಸಹಕಾರ ಸಂಘಕ್ಕೆ ಸೇರಿದ್ದು ಅವರು ನಿವೇಶನಗಳನ್ನು ಮಾಡಿದ್ದಾರೆಂದರೆ ಸರಿಯಲ್ಲ . ಆದರೆ ನನ್ನ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಲೇಔಟ್ ಆಗಿಲ್ಲ . ಯಜ್ಞವಲ್ಕ ಸೇವಾದತ್ತಿಯವರಿಂದ ದಾವಾಆಸ್ತಿಯನ್ನು ವಾದಿಯವರು ಖರೀದಿಸಿದ್ದಾರೆಂದರೆ ಸರಿಯಲ್ಲ . ಆ ಕಾರಣದಿಂದ ಜೆ.ತಿಮ್ಮಸಂದ್ರ ಪಂಚಾಯಿತಿಯವರು ನನಗೆ ಯಾವುದೇ ಆಸ್ತಿಯನ್ನು ಮಂಜೂರು ಮಾಡಿಲ್ಲ ಎಂದರೆ ಸರಿಯಲ್ಲ . ನಿಡಿ ***8*** ಕ್ಕೆ ವಾದಿಯವರು ಪಕ್ಷಗಾರರಲ್ಲ ಎಂದರೆ ಸರಿ . ಸದರಿ ದಾವೆಯಲ್ಲಿ ವಾದಿಯವರನ್ನು ಪಕ್ಷಗಾರರನ್ನಾಗಿ ಮಾಡದೇ ಸದರಿ ದಾವೆ ಪ್ರತಿವಾದಿಗಳೊಂದಿಗೆ ಶಾಮೀಲಾಗಿ ಸದರಿ ಡಿಕ್ರಿ ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ.

ಆಸಲು ದಾವೆ ನಂ **208/2009** ರಂತೆ ನಾಗರತ್ನಮ್ಮನವರು ನನ್ನ ತಂದೆಯ ವಿರುದ್ಧ ಒಂದು ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ . ಪಿ. ಶ್ರೀನಿವಾಸಪ್ಪ ಎಂದರೆ ನನ್ನ ತಂದೆ . ಸಾಕ್ಷಿಗೆ ಒಂದು ತೀರ್ಪಿನ ದೃಢೀಕೃತ ನಕಲನ್ನು ತೋರಿಸಲಾಗಿ ನೋಡಿ ಗುರುತಿಸುತ್ತಾರೆ , ಅದನ್ನು ನಿಪಿ **13** ಎಂದು ಗುರುತಿಸಲಾಯಿತು. ಅದರಲ್ಲಿ ವಿಶ್ವನಾಥರಾವ್ ರವರು **3** ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿಯವರು **4** ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ . ಸದರಿ ದಾವೆಯಲ್ಲಿ ವಾದಿಯವರು ಈ ದಾವೆಯಲ್ಲಿ ಹೇಳಿರುವ ಅಂಶಗಳನ್ನು ಹೇಳಿದ್ದು , ಅದರ ಆಧಾರದ ಮೇಲೆ ಸದರಿ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಜಾಂಶ ತಿಳಿಯುತ್ತದೆ ಎಂದು ನಿಪಿ **13** ನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನಿಡಿ **5** ರಿಂದ **7** ನ್ನು ಸ್ವಾಧೀನ ಇಲ್ಲದೇ ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ . ನಿಡಿ **1** ರಲ್ಲಿ ಇರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ತೀರ್ಪಿನಲ್ಲಿ ಸೈಟ್ ನಂ.**2** ಮತ್ತು **15** ಬೇರೆ ಬೇರೆ ಎಂದು ಉಲ್ಲೇಖ ಮಾಡಲಾಗಿದೆ ಎಂದರೆ ಸರಿ. ಸೈಟ್ ನಂ.**15** ಕ್ಕೂ ನನಗೂ ಯಾವುದೇ ಸಂಬಂಧವಿಲ್ಲ . ದಾವಾಆಸ್ತಿಯನ್ನು ಕಂಡುಹಿಡಿಯಲು ಅಥವಾ ಸೈಟ ನಂ.**15** ನ್ನು ಕಂಡುಹಿಡಿಯಲು ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ನನ್ನ ತಕರಾರು ಇಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳು ಸ್ವಾಧೀನ ರಹಿತ ದಾಖಲಾತಿಗಳು ಎಂದರೆ ಸರಿಯಲ್ಲ. ನಾನು ಹೇಳಿದಂತೆ ಅಲ್ಲಿ ಸೈಟ್ ನಂಬರು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ . **2016** ರಲ್ಲಿಯೇ ಸದರಿ ಬಡಾವಣೆ ಪುರಸಭೆಗೆ ಸೇರಿದ್ದರೂ ಆ ಬಗ್ಗೆ ನಾನು ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ . ವಾದಿಗಳ ದಾಖಲಾತಿಗಳನ್ನು ಪ್ರಶ್ನಿಸಿ ನಾನು ಎಲ್ಲಿಯೂ ಸಹ ಅರ್ಜಿ ಸಲ್ಲಿಸಿಲ್ಲ. ವಾದಿಯವರು ಕೊಂಡುಕೊಳ್ಳುವ ಮೊದಲೇ ಅವರಿಗೆ ಮಾರಾಟ ಮಾಡಿದವರು

*ಕಂದಾಯ ಕಟ್ಟುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯವರ ಇ.ಸಿ.ಯಲ್ಲಿಯೂ ಸಹ ಅವರನ್ನು ಹೊರತುಪಡಿಸಿ ಬೇರೆಯವರಿಗೆ ಆಸ್ತಿ ಇಲ್ಲ ಎಂದು ಬರೆದಿದ್ದಾರೆಂದರೆ ಸರಿಯಲ್ಲ. ದಾವಾಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ವಾದಿಯವರಿಗೆ ತೊಂದರೆ ನೀಡಿದ ಕಾರಣ ಅವರು ಈ ದಾವೆ ಹಾಕಿದ್ದಾರೆಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ 1 ಸೈಟ್ ನಂ.15 ಕ್ಕೆ ಸಂಬಂಧಿಸಿಲ್ಲ ಎಂದರೆ ಸರಿ. ಸೈಟ್ ನಂ.15 ಕ್ಕೆ ಡಿಕ್ರಿಯಾದರೆ ನನ್ನ ತಕರಾರು ಇಲ್ಲ.*

**ಮರು ವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ *ಗ*ಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು *ಬಿ.ಕೆ.*)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ